

## ಮೊದಲ ರಾತ್ರಿ

ನನ್ನ ಗೆಳೆಯನೊಬ್ಬನ ಮಗನ ಮದುವೆಗೆ ಹೋಗಿದ್ದೆ. ಮದುವೆ ಎಲ್ಲಾ ಸಾಂಗವಾಗಿ ನೆರವೇರಿ ರಾತ್ರಿಯ ಮುಖ್ಯ ಕಾರ್ಯಕ್ರಮವಷ್ಟೇ ಉಳಿದಿತ್ತು. ಹತ್ತಿರದ ನೆಂಟರು, ಖಾಸಾ ಗೆಳೆಯರ ಗುಂಪು ಅಷ್ಟೇ ಇತ್ತು. ನಾವೆಲ್ಲ ವರನ ತಂದೆಯಾದ ನನ್ನ ಗೆಳೆಯನೊಂದಿಗೆ ಹರಟೆ ಹೊಡೆಯುತ್ತ ಕುಳಿತಾಗ ನವದಂಪತಿ ಗೆಳೆಯನ ಆಶೀರ್ವಾದ ಪಡೆಯಲು ಬಂದರು. ಆಗ ಗೆಳೆಯ ತನ್ನ ಸೊಸೆಗೆ, 'ನೋಡಮ್ಮ, ಇದು ನಿಮ್ಮ ಮೊದಲ ರಾತ್ರಿ, ಅನಾಹುತ ನಡೆಯಬಾರದು ನೋಡು, ಅದಕ್ಕೇ ಹೇಳ್ತಾ ಇದ್ದೀನಿ...' ಅಂತ ಮಾತು ಆರಂಭಿಸಿದಾಗ ಅವನ ಪತ್ನಿ, 'ರೀ, ಅದೆಲ್ಲಾ ಈಗ್ಯಾಕೆ... ನೀವೊಂದು' ಎಂದು ತಡೆಯಲು ಬಂದರು. ಹುಡುಗಿ ನಾಚಿಕೆಯಿಂದ ನೆಲ ನೋಡುತ್ತ ನಿಂತಿದ್ದಳು. ನಾವೆಲ್ಲಾ ಇವನೇನು ಹೇಳುತ್ತಿದ್ದಾನೆ ಎನ್ನುವ ಕುತೂಹಲದಿಂದ ಅವನನ್ನೇ ನೋಡುತ್ತಿದ್ದೆವು. ಗೆಳೆಯ ದೊಡ್ಡ ದನಿಯಲ್ಲಿ ಹೇಳಿದ, 'ಏನಿಲ್ಲಮ್ಮ, ಅವನನ್ನು ಗೋಡೆ ಕಡೆಗೆ ಹಾಕು. ಇಲ್ಲದಿದ್ರೆ ಮಂಚದಿಂದ ಕೆಳಗೆ ಉರುಳಿ ಬೀಳ್ತಾನೆ' ಎಂದ.

**ಹಾಡ್ಯ ಬಿ. ಜಯಾನಂದ**

## ಭಕ್ತಿಗೀತೆ



ಆಗೆಲ್ಲಾ ಮನರಂಜನೆಗೆ ಈಗಿನಷ್ಟು ಆಯ್ಕೆಗಳು ಇರಲಿಲ್ಲ. ರೇಡಿಯೊದಲ್ಲಿ ಚಿತ್ರಗೀತೆಗಳನ್ನು ಕೇಳುವುದೆಂದರೆ ಎಲ್ಲಿಲ್ಲದ ಖುಷಿ. ಆಗ ರೇಡಿಯೊದಲ್ಲಿ ಮಧ್ಯಾಹ್ನ ಸಿಲೋನ್‌ನಿಂದ ಕನ್ನಡ ಚಿತ್ರಗೀತೆಗಳು ಪ್ರಸಾರವಾಗುತ್ತಿದ್ದವು. ನಾವೆಲ್ಲ ಕಾತರದಿಂದ ಕಾಯುವ ಸಮಯವದು. ಕನ್ನಡ ಬಾರದ ನಿರೂಪಕಿಯೊಬ್ಬಳು, 'ಇಂದು ಗುರುವಾರ, ಭಕ್ತಕುಂಬಾರ ಚಿತ್ರದ ಭಕ್ತಿಗೀತೆಯೊಂದನ್ನು ಈಗ ಕೇಳುತ್ತೀರಿ' ಎಂದಳು.
'ಜೋಡಿ ಬೇಡೊ ಕಾಲವಮ್ಮ, ತುಂಬಿ ಬಂದ ಪ್ರಾಯವಮ್ಮ...' ಹಾಡು ಕೇಳಿ ನಾವೆಲ್ಲಾ ದಂಗಾದೆವು. ಕನ್ನಡ ಭಾಷೆ ಗೊತ್ತಿರದ ಆಕೆ, ಭಕ್ತಕುಂಬಾರ ಚಿತ್ರದ ಎಲ್ಲಾ ಹಾಡುಗಳೂ ಭಕ್ತಿಗೀತೆಗಳೆಂದು ತಿಳಿದಿದ್ದಳೇನೊ...

**ಪುಷ್ಪಾ ಎನ್.ಕೆ. ರಾವ್**

ಚಿತ್ರಗಳು: ಗಣೇಶ ಆಚಾರ್ಯ